

‘ಹಚ್ಚೇವು ಕನ್ನಡದ ದೀಪ’ ಎನ್ನುವ ಸಾಲು ಪ್ರತಿ ಬಾರಿ ಮೊಳಗಿದಾಗಲೂ ಕನ್ನಡಿಗರೆದೆಗಳಲ್ಲಿ ಅಭಿಮಾನದ ದೀಪವೊಂದು ಬೆಳಗುತ್ತದೆ. ಹೀಗೆ, ಬೆಳಗುವ ಕನ್ನಡ ದೀಪದ ಬತ್ತಿಯಾಗಿ, ಎಣ್ಣೆಯಾಗಿ ಹಲವು ಸೋದರ ಭಾಷೆಗಳು ಇರುವುದನ್ನು ನಾವು ಗಮನಿಸಬೇಕು. ತುಳು, ಕೊಡವ, ಅರೆಭಾಷೆ, ಕೊಂಕಣಿ, ಬ್ಯಾರಿ - ಇಂಥ ಹಲವು ಭಾಷೆಗಳು ತಮ್ಮ ಅನನ್ಯತೆಯನ್ನು ಉಳಿಸಿಕೊಂಡೇ ಕನ್ನಡದ ಚೆಲುವು-ಸಮೃದ್ಧಿ ಹೆಚ್ಚಿಸುವ ಕೆಲಸವನ್ನು ನಿರಂತರವಾಗಿ ಮಾಡುತ್ತಿವೆ. ಆ ಕಾರಣದಿಂದಲೇ ‘ಕನ್ನಡದ ಹಣತೆ’ ಎನ್ನುವುದು ಹಲವು ನುಡಿಗಳ ಬೆಳಕಿನ ಮೊತ್ತವೂ ಹೌದು. ‘ಸುವರ್ಣ ಕರ್ನಾಟಕ’ ಸಂಭ್ರಮದ ಸಂದರ್ಭದಲ್ಲಿ, ನಾಡಿನ ಭಾಷಾಬಹುತ್ವವನ್ನು ಮನಗಾಣಿಸುವ ಪ್ರಯತ್ನದ ಈ ವಿಶಿಷ್ಟ ಬರಹ ಕನ್ನಡದ ಚೆಲುವನ್ನು ಎತ್ತಿ ಹಿಡಿಯುವುದರ ಜೊತೆಗೆ, ಕನ್ನಡಿಗರಲ್ಲಿ ಆರ್ದ್ರ ಗರ್ವವನ್ನು ಮೂಡಿಸುವಂತಿದೆ.

■ ಕೋಡಿಬೆಟ್ಟು ರಾಜಲಕ್ಷ್ಮಿ